ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 11/3/2021

# ಹಣಕಾಸು ಇಲಾಖೆ ಸಿಎಂ ಬಳಿ ಇರಬಾರದು

**ವಿಧಾನಪರಿಷತ್ತು:** 'ಹಣಕಾಸು ಇಲಾಖೆಯನ್ನು ಮುಖ್ಯಮಂತ್ರಿಯಾದವರು ತಮ್ಮ ಬಳಿ ಇಟ್ಟುಕೊಳ್ಳಬಾರದು. ಮುಖ್ಯಮಂತ್ರಿ ಆದರೆಂದರೆ ಅವರೇನು ಆರ್ಥಿಕ ತಜ್ಞರು ಅಂತಲ್ಲ, ನಾನು ಮತ್ತೆ ಮತ್ತೆ ಹೇಳುತ್ತೇನೆ, ಹಣಕಾಸು ಇಲಾಖೆಗೆ ಪ್ರತ್ಯೇಕ ಸಚಿವರು ಇರಬೇಕು'.

**ಮುಖ್ಯಮಂತ್ರಿ ಅಂದಾಕ್ಷಣ ಅವರೇನು ಆರ್ಥಿಕ ತಜ್ಞರಲ್ಲ: ಎಚ್. ವಿಶ್ವನಾಥ್**

ಹೀಗೆಂದು ವಿಧಾನ ಪರಿಷತ್ತಿನ ಬಿಜೆಪಿಯ ಹಿರಿಯ ಸದಸ್ಯ ಎಚ್. ವಿಶ್ವನಾಥ್ ಮನವಿ ಮಾಡಿದರು. ಅವರ ಮಾತಿಗೆ ಪ್ರತಿಪಕ್ಷ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು. ಅನೇಕರು ಹೇಳಲಾಗದ ಮಾತುಗಳನ್ನು ನೀವು ಹೇಳುತ್ತಿದ್ದೀರಿ, ನಿಮಗೆ ಅಭಿನಂದನೆ ಎಂದರು.

ಸಿಎಂ ಯಡಿಯೂರಪ್ಪ ಮಂಡಿಸಿದ 2021–22ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಯಲ್ಲಿ ಬುಧವಾರ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಎಚ್.ಡಿ. ಕುಮಾರಸ್ವಾಮಿ ಅವರ ಹೆಸರನ್ನು ಗುರಾಣಿ ಮಾಡಿಕೊಂಡು ಹಣಕಾಸು ಇಲಾಖೆ ತಮ್ಮ ಬಳಿ ಇಟ್ಟುಕೊಳ್ಳುವ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಮೊನಚು ಮಾತುಗಳಿಂದ ತಿವಿದರು.

ಸಿದ್ದರಾಮಯ್ಯ 13 ಬಾರಿ, ಎಚ್.ಡಿ. ಕುಮಾರಸ್ವಾಮಿ ನಾಲ್ಕು ಬಾರಿ ಮತ್ತು ಬಿ.ಎಸ್. ಯಡಿಯೂರಪ್ಪ 8 ಬಾರಿ ಬಜೆಟ್ ಕೊಟ್ಟಿದ್ದಾರೆ. ಆದರೆ, ಅಧಿಕಾರಿಗಳು ಬರೆದುಕೊಟ್ಟ ಅಂಕಿ-ಅಂಶಗಳನ್ನು ಅವರು ಮಂಡಿಸಿದ್ದಾರಷ್ಟೇ, ಆರ್ಥಿಕ ತಜ್ಞರಾಗಿ ಬಜೆಟ್ ಮಂಡಿಸಿದ್ದಾರೆ ಎಂದು ಹೇಳಲಾಗುವುದಿಲ್ಲ. ಮುಖ್ಯಮಂತ್ರಿಗಳೇ ಹಣಕಾಸು ಇಲಾಖೆ ಯಾಕೆ ಇಟ್ಟುಕೊಳ್ಳಬೇಕು? ಮುಖ್ಯಮಂತ್ರಿ ಆದವರೆಲ್ಲ ಆರ್ಥಿಕ ತಜ್ಞರು ಆಗಿರುತ್ತಾರಾ? ಇದನ್ನೇ ಕೇಳಿದರೆ ಕುಮಾರಸ್ವಾಮಿ ನನ್ನ ಮೇಲೆ ಎಗರಿ ಬಿದ್ದರು. 33 ಇಲಾಖೆಗಳಲ್ಲಿ ಹಣಕಾಸು, ಡಿಪಿಎಆರ್ ಮತ್ತು ಕಾನೂನು ಈ ಮೂರು ಇಲಾಖೆಗಳು ಬಹಳ ಪ್ರಮುಖ. ಇದರಲ್ಲಿ ಎರಡು ಇಲಾಖೆಗಳನ್ನು ಈಗಿನ ಮುಖ್ಯಮಂತ್ರಿಗಳು ಇಟ್ಟುಕೊಂಡಿದ್ದಾರೆ ಎಂದು ವಿಶ್ವನಾಥ್ ಹೇಳಿದರು.

ಪ್ರಧಾನಿ ಮೋದಿ ತಮ್ಮ ಬಳಿ ಯಾವುದೇ ಇಲಾಖೆ ಇಟ್ಟುಕೊಂಡಿಲ್ಲ, ಅವರು ಹಿಂದೆ 12 ವರ್ಷ ಗುಜರಾತ್ ಸಿಎಂ ಆಗಿದ್ದಾಗಲೂ ಹಣಕಾಸು ಇಲಾಖೆ ನಮ್ಮ ರಾಜ್ಯದ ಈಗಿನ ರಾಜ್ಯಪಾಲ ವಜುಭಾಯಿ ವಾಲಾ ಅವರ ಬಳಿ ಇತ್ತು. ಆದರೆ, ಇಲ್ಲಿ ಮಾತ್ರ ಹಣಕಾಸು ಇಲಾಖೆ ಮುಖ್ಯಮಂತ್ರಿ ತಮ್ಮ ಬಳಿ ಇಟ್ಟುಕೊಳ್ಳುವುದು ಯಾಕೆ? ಆರ್ಥಿಕ ನಿರ್ವಹಣೆ ಸರಿ ಆಗಿರಬೇಕು, ಅನುಷ್ಠಾನ ಸಮರ್ಪಕವಾಗಿ ಆಗಬೇಕೆಂದು ಚಾಟಿ ಹಿಡಿದು ಕೂರುವ ಒಬ್ಬ ಸಚಿವರು ಬೇಕು. ಆ ಕೆಲಸ ಸಿಎಂ ಮಾಡಲು ಆಗುವುದಿಲ್ಲ, ಏಕೆಂದರೆ ಅವರಿಗೆ ಅಷ್ಟೊಂದು ಸಮಯ ಇರುವುದಿಲ್ಲ, ಇದು ಸಾಮರ್ಥ್ಯದ ಪ್ರಶ್ನೆ ಅಲ್ಲ; ಸಮಯದ ಪ್ರಶ್ನೆ. ಹಾಗಾಗಿ, ಹಣಕಾಸು ಇಲಾಖೆಯನ್ನು ಬೇರೆ ಸಚಿವರಿಗೆ ನೀಡಬೇಕು ಎಂದು ವಿಶ್ವನಾಥ್ ಆಗ್ರಹಿಸಿದರು.



ಸದನದಲ್ಲಿ ಎಚ್.ವಿಶ್ವನಾಥ್ ಮಾತನಾಡಿದರು.

## ಅಧಿಕಾರಿಗಳು ಸಿಎಂಗೆ ಟೋಪಿ ಹಾಕ್ತಾರೆ

ಕಳೆದ 10 ವರ್ಷಗಳ ಬಜೆಟ್‌ಗಳನ್ನು ಓದಿದೆ. ದಿನಾಂಕ ಮಾತ್ರ ಬೇರೆ, ಅಂಕಿ–ಅಂಶ ಎಲ್ಲವೂ ಅದೇ ಹಳೆಯದ್ದು. ಇಂತಹ ಅಂಕಿ–ಅಂಶಗಳನ್ನು ಹೇಳಿ ಅಧಿಕಾರಿಗಳು ಮುಖ್ಯಮಂತ್ರಿಯವರಿಗೆ ಬಹಳ ಚೆನ್ನಾಗಿ ಟೋಪಿ ಹಾಕ್ತಾರೆ. ನಿಗಮ ಮಂಡಳಿಗಳಿಂದ 23 ಸಾವಿರ ಕೋಟಿ ರೂ. ಸಂಪನ್ಮೂಲ ಸಂಗ್ರಹ ಮಾಡಲಾಗುತ್ತದೆ ಎಂದು ಹೇಳಲಾಗಿದೆ. ನಷ್ಟದಲ್ಲಿರುವ ನಿಗಮ–ಮಂಡಳಿಗಳಿಂದ ಇದು ಸಾಧ್ಯವೇ? ದೇವರಾಜ ಅರಸು ಸಾಮಾಜಿಕ ನ್ಯಾಯದ ಕಲ್ಪನೆಯ, ರಾಮಕೃಷ್ಣ ಹೆಗಡೆ ಗ್ರಾಮೀಣ ಭಾರತ ಮತ್ತು ಎಸ್.ಎಂ. ಕೃಷ್ಣ ಅವರು ಐಟಿ-ಬಿಟಿ ಕಲ್ಪನೆ ಇಟ್ಟುಕೊಂಡು ಬಜೆಟ್ ಮಂಡಿಸಿದ್ದರು. ಈಗಿನವರು ಯಾವುದಾರ ಬಗ್ಗೆಯೂ ಚಕಾರ ಎತ್ತಿಲ್ಲ ಎಂದು ವಿಶ್ವನಾಥ್ ಹೇಳಿದರು.